ಸರ್ಕಾರಿ ಪ್ರೌಢಶಾಲೆ ಜಡಿಗೇನಹಳ್ಳಿ, ಹೊಸಕೋಟೆ ತಾ|| ಬೆಂಗಳೂರು ಗ್ರಾಮಾಂತರ ಜಿಲ್ಲೆ

2018-19 ನೇ ಸಾಲಿನ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗಾಗಿ ಕ್ರಿಯಾಯೋಜನೆ.





# ಸರ್ಕಾರಿ ಪ್ರೌಢಶಾಲೆ ಜಡಿಗೇನಹಳ್ಳಿ, ಹೊಸಕೋಟೆ ತಾ|| ಬೆಂ|| ಗ್ರಾ|| ಜಿಲ್ಲೆ

ಆತ್ಮೀಯ ಎಲ್ಲಾ ಗಣಿತ ಶಿಕ್ಷಕ ಮಿತ್ರರೇ ಹಾಗು ಪ್ರೀತಿಯ ವಿದ್ಯಾರ್ಥಿಗಳೇ

## 2018-19 ನೇ ಸಾಲಿನ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗಾಗಿ ಮತ್ತು ನಿಧಾನವಾಗಿ ಕಲಿಯುವ ವಿದ್ಯಾರ್ಥಿಗಳ ಸುಲಭ ಉತ್ತೀರ್ಣಕ್ಕಾಗಿ ಒಂದು ಪ್ರಯತ್ನ.

ಹಂತ-1 ರಲ್ಲಿರುವ ಎಲ್ಲಾ ಕಲಿಕಾಂಶಗಳನ್ನು ತೃಪ್ತಿಕರವಾಗಿ ಕಲಿತಿರುವ ಬಗ್ಗೆ ಕಲಿಕಾ ದೃಢೀಕರಣ ಮಾಡಿಕೊಳ್ಳಲು ಮುಂದಿನ ಕನಿಷ್ಟ ಕಲಿಕಾಂಶಗಳ ತಪಸೀಲು ಪಟ್ಟಿಯನ್ನು ಬಳಸಿಕೊಳ್ಳಬಹುದು. ವಿದ್ಯಾರ್ಥಿಗಳು ಹಂತ-1ರ ಎಲ್ಲಾ ಅಂಶಗಳನ್ನು ಸರಿಯಾಗಿ ತೃಪ್ತಿಕರವಾಗಿ ಕಲಿತ್ತಿದ್ದರೆ, ಅಂತಹ ವಿದ್ಯಾರ್ಥಿಗಳು ಹಂತ-2 ರಲ್ಲಿನ ಅಂಶಗಳನ್ನು ಅಭ್ಯಾಸ ಮಾಡುವುದು ಅಥವಾ ಹಂತ-1ರ ಯಾವುದಾದರೂ ಅಂಶಗಗಳಲ್ಲಿ ಕಲಿಕೆ ತೃಪ್ತಿ ನೀಡದಿದ್ದಲ್ಲಿ ಹಂತ-1ನ್ನು ಪುನಃ ಅಭ್ಯಾಸ ಮಾಡಿದಲ್ಲಿ ಅಥವಾ ಪುನರ್ ಅವಲೋಕಿಸಿದ್ದಲ್ಲಿ ಹಂತ-2ರ ಕಲಿಕೆ ಸುಗಮವಾದೀತು ಮತ್ತು ಸುಲಭವಾದೀತು

ಈ ಮೂಲಕ ಉತ್ತಮ ಫಲಿತಾಂಶ ಮತ್ತು ಅಂಕಗಳಿಸುವೆಡೆಗೆ ನಾವೆರೂ ದಾಪುಗಾಲಿಡೋಣ
ಗಣಿತ ಕಲಿಕೆ ಆನಂದದ ಕಲಿಕೆಯಾಗುವಂತೆ ಮುನ್ನಡೆಯೋಣ

ಅಗತ್ಯ ಸಲಹೆಗಳನ್ನು ನಿರೀಕ್ಷಿಸುತ್ತಾ ಶುಭಹಾರೈಕೆಗಳೊಂದಿಗೆ

ಹೊಸ ವರ್ಷದ ಶುಭಾಶಯಗಳು



ಶಿಕ್ಷಕರ ಹೆಸರು : ರಾಮಕೃಷ್ಣ. ಡಿ.ಆರ್ 8867495355

# ಹಂತ - 1

| 1 | ವೃತ್ತಗಳಿಗೆ ಸ್ಪರ್ಶಕಗಳ ರಚನೆ | ನಿರೀಕ್ಷಿಸಬಹುದಾದ ಅಂಕಗಳು | 02 |
|---|---|---|---|

**1** 6cmತ್ರಿಜ್ಯದಒಂದು ವೃತ್ತವನ್ನು ಎಳೆಯಿರಿ ಇದರಕೇಂದ್ರದಿಂದ10cmದೂರದಒಂದು ಬಿಂದು ವಿನಿಂದ ವೃತ್ತಕ್ಕೆಒಂದುಜೊತೆ ಸ್ಪರ್ಶಕಗಳನ್ನು ರಚಿಸಿ




**2** AB = 8cm ರೇಖಾಖಂಡ ಎಳೆಯಿರಿ.`A' ಯನ್ನು ಕೇಂದ್ರವಾಗಿರಿಸಿ 4cm ತ್ರಿಜ್ಯದ ವೃತ್ತವನ್ನು ರಚಿಸಿ ಮತ್ತು`B' ಯನ್ನು ಕೇಂದ್ರವಾಗಿರಿಸಿ 3cm ತ್ರಿಜ್ಯದ ಮತ್ತೊಂದು ವೃತ್ತವನ್ನು ರಚಿಸಿ. ಪ್ರತಿ ವೃತ್ತಕ್ಕೆ ಮತ್ತೊಂದು ವೃತ್ತದ ಕೇಂದ್ರದಿಂದ ಸ್ಪರ್ಶಕಗಳನ್ನು




ರಚಿಸಿ

**3** 5cm ತ್ರಿಜ್ಯದ ವೃತ್ತಕ್ಕೆ, ಸ್ಪರ್ಶಕಗಳ ನಡುವಿನ ಕೋನ $60^0$ಇರುವಂತೆ ಒಂದುಜೊತೆ ಸ್ಪರ್ಶಕಗಳನ್ನು ಎಳೆಯಿರಿ.




**4** 7.6cmಉದ್ದವಿರುವಒಂದುರೇಖಾಖಂಡವನ್ನು ಎಳೆ ಯಿರಿ ಮತ್ತುಇದನ್ನು 5:8 ಅನುಪಾತದಲ್ಲಿ ವಿಭಾಗಿಸಿ.




## ಅಭ್ಯಾಸಕ್ಕಾಗಿ ಲೆಕ್ಕಗಳು

| | |
|---|---|
| 1 | 4cm ತ್ರಿಜ್ಯದ ಒಂದು ವೃತ್ತವನ್ನು ಎಳೆಯಿರಿ ಇದರ ಕೇಂದ್ರದಿಂದ 7cm ದೂರದ ಒಂದು ಬಿಂದುವಿನಿಂದ ವೃತ್ತಕ್ಕೆ ಒಂದು ಜೊತೆ ಸ್ಪರ್ಶಕಗಳನ್ನು ರಚಿಸಿ |
| 2 | 4cm ತ್ರಿಜ್ಯವಿರುವ ವೃತ್ತಕ್ಕೆ ವೃತ್ತದಿಂದ 5cm ದೂರದಲ್ಲಿರುವ ಹೊರಗಿನ ಬಿಂದುವಿನಿಂದ ಒಂದು ಜೊತೆ ಸ್ಪರ್ಶಕಗಳನ್ನು ರಚಿಸಿ |
| 3 | 3cm ಮತ್ತು 7cm ತ್ರಿಜ್ಯಗಳಿರುವ ಎರಡು ಏಕಕೇಂದ್ರೀಯ ವೃತ್ತಗಳಿವೆ. 7cm ತ್ರಿಜ್ಯದ ವೃತ್ತದ ಮೇಲಿನ ಒಂದು ಬಿಂದುವಿನಿಂದ 3cm ತ್ರಿಜ್ಯದ ವೃತ್ತಕ್ಕೆ ಸ್ಪರ್ಶಕವನ್ನು ರಚಿಸಿ |
| 4 | 3cm ತ್ರಿಜ್ಯದ ಒಂದು ವೃತ್ತವನ್ನು ಎಳೆಯಿರಿ. ಇದರ ವ್ಯಾಸವನ್ನು ಎರಡೂಕಡೆ ವೃದ್ಧಿಸಿ ಅದರ ಮೇಲೆ ಕೇಂದ್ರ ದಿಂದ 7cm ದೂರದಲ್ಲಿರುವಂತೆ ಎರಡು ಬಿಂದುಗಳನ್ನು ಗುರುತಿಸಿ. ಈ ಬಿಂದುಗಳಿಂದ ವೃತ್ತಕ್ಕೆ ಸ್ಪರ್ಶಕಗಳನ್ನು ಎಳೆಯಿರಿ. |
| 5 | 4cm ತ್ರಿಜ್ಯದ ವೃತ್ತಕ್ಕೆ, ಸ್ಪರ್ಶಕಗಳ ನಡುವಿನ ಕೋನ $120^0$ಇರುವಂತೆ ಒಂದು ಜೊತೆ ಸ್ಪರ್ಶಕಗಳನ್ನು ಎಳೆಯಿರಿ. |
| 6 | AB = 9cm ರೇಖಾಖಂಡ ಎಳೆಯಿರಿ. `A' ಯನ್ನು ಕೇಂದ್ರವಾಗಿರಿಸಿ 4cm ತ್ರಿಜ್ಯದ ವೃತ್ತವನ್ನು ರಚಿಸಿ ಮತ್ತು `B' ಯನ್ನು ಕೇಂದ್ರವಾಗಿರಿಸಿ 3cm ತ್ರಿಜ್ಯದ ಮತ್ತೊಂದು ವೃತ್ತವನ್ನು ರಚಿಸಿ. ಪ್ರತಿ ವೃತ್ತಕ್ಕೆ ಮತ್ತೊಂದು ವೃತ್ತದ ಕೇಂದ್ರದಿಂದ ಸ್ಪರ್ಶಕಗಳನ್ನು ರಚಿಸಿ |
| 7 | AB = 10cm ಅಳತೆಯ ರೇಖಾಖಂಡವನ್ನು ಎಳೆದು ಅದನ್ನು 2 : 4 ರ ಅನುಪಾತದಲ್ಲಿ ವಿಭಾಗಿಸಿ. |
| 8 | 3cm ತ್ರಿಜ್ಯವಿರುವ ವೃತ್ತಕ್ಕೆ ಕೇಂದ್ರದಿಂದ 6cm ದೂರದಲ್ಲಿರುವ ಹೊರಗಿನ ಬಿಂದುವಿನಿಂದ ಒಂದು ಜೊತೆ ಸ್ಪರ್ಶಕಗಳನ್ನು ರಚಿಸಿ |
| 9 | 3cm ತ್ರಿಜ್ಯವುಳ್ಳ ವೃತ್ತಕ್ಕೆ ಕೇಂದ್ರದಲ್ಲಿ $75^0$ ಕೋನವಿರುವ ತ್ರಿಜ್ಯಗಳನ್ನು ರಚಿಸಿ.ತ್ರಿಜ್ಯದ ಅಂತ್ಯಬಿಂದುಗಳಲ್ಲಿ ಸ್ಪರ್ಶಕಗಳನ್ನು ರಚಿಸಿ. |

ಶಿಕ್ಷಕರ ಹೆಸರು : ರಾಮಕೃಷ್ಣ. ಡಿ.ಆರ್ 8867495355

| 2 | ಸಮರೂಪ ತ್ರಿಭುಜಗಳ ರಚನೆ | ನಿರೀಕ್ಷಿಸಬಹುದಾದ ಅಂಕಗಳು | 03 |
|---|---|---|---|

**1** 5cm, 6cm,ಮತ್ತು 7cm ಬಾಹುಗಳಿರುವ ತ್ರಿಭುಜವನ್ನು ರಚಿಸಿ.ಇದಕ್ಕೆ ಸಮರೂಪವಾಗಿರುವ ಅನುರೂಪ ಬಾಹುಗಳು $\frac{7}{5}$ ರಷ್ಟು ಇರುವಂತೆ ಮತ್ತೊಂದು ತ್ರಿಭುಜವನ್ನು ರಚಿಸಿ.




**2** BC =6cm, AB= 5cm ಮತ್ತು∠ABC = 60° ಇರುವಂತೆ ABC ತ್ರಿಭುಜವನ್ನು ರಚಿಸಿ. ನಂತರ ಮತ್ತೊಂದು ತ್ರಿಭುಜವನ್ನು, ಅದರ ಬಾಹುಗಳು ತ್ರಿಭುಜ ABC ಯ ಅನುರೂಪ ಬಾಹುಗಳ $\frac{3}{4}$ರಷ್ಟಿರುವಂತೆ ರಚಿಸಿ.




**3** ಪಾದ8cm,ಎತ್ತರ4cm ಇರುವ ಸಮದ್ವಿಬಾಹು ತ್ರಿಭುಜವನ್ನು ರಚಿಸಿ. ಇದಕ್ಕೆ ಸಮರೂಪವಾಗಿರುವಅನುರೂಪ ಬಾಹುಗಳು $1\frac{1}{2}$ರಷ್ಟುಇರುನವಂತೆಮತ್ತೊಂದುತ್ರಿಭುಜವನ್ನು




**4** BC =7cm,∠A =45°, ∠B=105°ಇರುವಂತೆABC ತ್ರಿಭುಜವನ್ನು ರಚಿಸಿ ನಂತರ ಮತ್ತೊಂದು ತ್ರಿಭುಜವನ್ನು, ಅದರ ಬಾಹುಗಳ,ΔABC ಯಅನುರೂಪ ಬಾಹುಗಳ $\frac{5}{4}$ರಷ್ಟಿರುವಂತೆ ರಚಿಸಿ.




## ಅಭ್ಯಾಸಕ್ಕಾಗಿ ಲೆಕ್ಕಗಳು

1. 6cm, 7cm, ಮತ್ತು 8cm, ಅಳತೆಯ ತ್ರಿಭುಜ ರಚಿಸಿ. ಅದರ ಬಾಹುಗಳ $\frac{5}{4}$ ರಷ್ಟು ಅಳತೆ ಇರುವ ಅದಕ್ಕೆ ಸಮರೂಪಿಯಾದ ಇನ್ನೊಂದು ತ್ರಿಭುಜವನ್ನು ರಚಿಸಿ
2. 3cm ಅಳತೆಯ ಸಮಬಾಹು ತ್ರಿಭುಹ ರಚಿಸಿ. ಅದರ ಬಾಹುಗಳ ಎರಡುರಷ್ಟು ಅಳತೆ ಇರುವ ಅದಕ್ಕೆ ಸಮರೂಪಿಯಾದ ಇನ್ನೊಂದು ತ್ರಿಭುಜವನ್ನು ರಚಿಸಿ.
3. ಪಾದ 7cm, ಎತ್ತರ 5cm ಇರುವ ಸಮದ್ವಿಬಾಹು ತ್ರಿಭುಜವನ್ನು ರಚಿಸಿ. ಇದಕ್ಕೆ ಸಮರೂಪವಾಗಿರುವ ಅನುರೂಪ ಬಾಹುಗಳು $1\frac{1}{5}$ ರಷ್ಟು ಇರುನವಂತೆ ಮತ್ತೊಂದು ತ್ರಿಭುಜವನ್ನು
4. AB=5cm ,BC=7cm ಮತ್ತು ∠B = 60° ಇರುವಂತೆ ABC ತ್ರಿಭುಜ ರಚಿಸಿ. ಅದರ ಬಾಹುಗಳ $\frac{5}{3}$ ರಷ್ಟು ಅಳತೆಹೊಂದಿರುವ ಅದಕ್ಕೆ ಸಮರೂಪಿಯಾದ ಇನ್ನೊಂದು ತ್ರಿಭುಜವನ್ನು ರಚಿಸಿ.
5. AB= 6cm , ∠A= 60°ಮತ್ತು ∠B =75° ಇರುವಂತೆ ΔABC ತ್ರಿಭುಜ ರಚಿಸಿ.ಅದರ ಬಾಹುಗಳ $1\frac{1}{2}$ ರಷ್ಟು ಅಳತೆ ಇರುವ ಅದಕ್ಕೆ ಸಮರೂಪಿಯಾದ ಇನ್ನೊಂದು ತ್ರಿಭುಜವನ್ನು ರಚಿಸಿ.
6. 5.5cm, 6.5cm, ಮತ್ತು 7cm, ಅಳತೆಯ ತ್ರಿಭುಜ ರಚಿಸಿ. ಅದರ ಬಾಹುಗಳ $\frac{5}{4}$ ರಷ್ಟು ಅಳತೆ ಇರುವ ಅದಕ್ಕೆ ಸಮರೂಪಿಯಾದ ಇನ್ನೊಂದು ತ್ರಿಭುಜವನ್ನು ರಚಿಸಿ

ಶಿಕ್ಷಕರ ಹೆಸರು : ರಾಮಕೃಷ್ಣ. ಡಿ.ಆರ್ 8867495355

| 3 | ಓಜೀವ್ ರಚನೆ | ನಿರೀಕ್ಷಿಸಬಹುದಾದ ಅಂಕಗಳು | 03 |
|---|---|---|---|

ಈ ವಿತರಣೆಯನ್ನು "ಕಡಿಮೆಇರುವ ವಿಧಾನದ" ಸಂಚಿತಆವೃತ್ತಿ ವಿತರಣೆಯಾಗಿ ಬದಲಾಯಿಸಿ ಮತ್ತುಅದರಓಜೀವ್ ಎಳೆಯಿರಿ.

**1**

| ದೈನಂದಿನ ಆದಾಯ | ಕೆಲಸಗಾರರ ಸಂಖ್ಯೆ | ದೈನಂದಿನ ಆದಾಯ | ಕೆಲಸಗಾರರ ಸಂಖ್ಯೆ | ಸಂಚಿತ ಆವೃತ್ತಿ |
|---|---|---|---|---|
| 100–120 | 12 | 120 ಕ್ಕಿಂತಕಡಿಮೆ | 12 | 12 |
| 120–140 | 14 | 140 ಕ್ಕಿಂತಕಡಿಮೆ | 14 | 26 |
| 140–160 | 8 | 160ಕ್ಕಿಂತ ಕಡಿಮೆ | 8 | 34 |
| 160–180 | 6 | 180ಕ್ಕಿಂತ ಕಡಿಮೆ | 6 | 40 |
| 180–200 | 10 | 200ಕ್ಕಿಂತ ಕಡಿಮೆ | 10 | 50 |




ಈ ವಿತರಣೆಯನ್ನು "ಅಧಿಕಇರುವ ವಿಧಾನದ" ವಿತರಣೆಯಾಗಿ ಬದಲಾಯಿಸಿ, ಇದರಓಜೀವ್ ಎಳೆಯಿರಿ

**2**

| ಉತ್ಪಾದನಾ ಇಳುವರಿ(kg/ ha ಗಳಲ್ಲಿ) | ಹೊಲ ಗಳ ಸಂಖ್ಯೆ | ಉತ್ಪಾದನಾ ಇಳುವರಿ (kg/ ha ಗಳಲ್ಲಿ) | ಹೊಲ ಗಳ ಸಂಖ್ಯೆ | ಸಂಚಿತ ಆವೃತ್ತಿ |
|---|---|---|---|---|
| 50 – 55 | 2 | 50ಕ್ಕಿಂತಅಧಿಕ | 2 | 100 |
| 55 – 60 | 8 | 55ಕ್ಕಿಂತಅಧಿಕ | 8 | 98 |
| 60 – 65 | 12 | 60ಕ್ಕಿಂತಅಧಿಕ | 12 | 90 |
| 65 – 70 | 24 | 65ಕ್ಕಿಂತಅಧಿಕ | 24 | 78 |
| 70 – 75 | 38 | 70ಕ್ಕಿಂತಅಧಿಕ | 38 | 54 |
| 75 – 80 | 16 | 75ಕ್ಕಿಂತಅಧಿಕ | 16 | 16 |




## ಅಭ್ಯಾಸಕ್ಕಾಗಿ ಲೆಕ್ಕಗಳು

**1** ಈ ದತ್ತಾಂಶಗಳಿಗೆ "ಕಡಿಮೆ ವಿಧಾನ" ದಓಜೀವ್ ಎಳೆಯಿರಿ.

| ತೂಕ(kg ಗಳಲ್ಲಿ) | ವಿದ್ಯಾರ್ಥಿಗಳ ಸಂಖ್ಯೆ |
|---|---|
| 40 – 45 | 10 |
| 45 – 50 | 12 |
| 50 – 55 | 18 |
| 55 – 60 | 16 |
| 60 – 65 | 14 |

**2** ಈ ದತ್ತಾಂಶಗಳಿಗೆ "ಅಧಿಕ ವಿಧಾನ" ದಓಜೀವ್ ಎಳೆಯಿರಿ.

| ವರ್ಗಾಂತರ | ಆವೃತ್ತಿ |
|---|---|
| 10 – 20 | 5 |
| 20 – 30 | 8 |
| 30 – 40 | 12 |
| 40 – 50 | 15 |
| 50 – 60 | 17 |
| 60 – 70 | 13 |

**3** ಈ ದತ್ತಾಂಶಗಳಿಗೆ "ಕಡಿಮೆ ವಿಧಾನ" ದಓಜೀವ್ ಎಳೆಯಿರಿ.

| ಅಂಕಗಳು | ವಿದ್ಯಾರ್ಥಿಗಳ ಸಂಖ್ಯೆ |
|---|---|
| 50ಕ್ಕಿಂತಕಡಿಮೆ | 8 |
| 60 ಕ್ಕಿಂತಕಡಿಮೆ | 20 |
| 70ಕ್ಕಿಂತ ಕಡಿಮೆ | 34 |
| 80ಕ್ಕಿಂತ ಕಡಿಮೆ | 45 |
| 90ಕ್ಕಿಂತ ಕಡಿಮೆ | 53 |
| 100ಕ್ಕಿಂತ ಕಡಿಮೆ | 60 |

**4** ಈ ದತ್ತಾಂಶಗಳಿಗೆ "ಅಧಿಕ ವಿಧಾನ" ದಓಜೀವ್ ಎಳೆಯಿರಿ.

| ಲಾಭ (ಲಕ್ಷ ಗಳಲ್ಲಿ) | ಅಂಗಡಿಗಳ ಸಂಖ್ಯೆ |
|---|---|
| 50ಕ್ಕಿಂತಅಧಿಕ | 10 |
| 55ಕ್ಕಿಂತಅಧಿಕ | 18 |
| 60ಕ್ಕಿಂತಅಧಿಕ | 30 |
| 65ಕ್ಕಿಂತಅಧಿಕ | 45 |
| 70ಕ್ಕಿಂತಅಧಿಕ | 60 |
| 75ಕ್ಕಿಂತಅಧಿಕ | 75 |

ಶಿಕ್ಷಕರ ಹೆಸರು : ರಾಮಕೃಷ್ಣ. ಡಿ.ಆರ್ 8867495355

| 4 | ನಕ್ಷೆಯ ವಿಧಾನದಿಂದ ರೇಖಾತ್ಮಕ ಸಮೀಕರಣಗಳ ಜೋಡಿಗೆ ಪರಿಹಾರ | ನಿರೀಕ್ಷಿಸಬಹುದಾದ ಅಂಕಗಳು | 04 |
|---|---|---|---|

## 1. 2X + Y = 6, X + Y = 4.

Y = 6 - 2X

| X | 0 | 1 | 2 |
|---|---|---|---|
| Y | 6 | 4 | 2 |

X=0, Y= 6-2X0, 6- 0, =6

X=1, Y= 6-2X1, 6 -2, =4

X=2, Y= 6-2X2, 6- 4, =2

Y = 4 - X

| X | 0 | 1 | 2 |
|---|---|---|---|
| Y | 4 | 3 | 2 |

X=0, Y= 4- 0, =4

X=1, Y= 4- 1, =3

X=2, Y= 4- 2, =2



X = 2

Y = 2

## 2. X + 2Y = 11, 2X - 3Y = -6.

2y = 11 – x, y = $\frac{11-x}{2}$

| X | 1 | 3 | 5 |
|---|---|---|---|
| Y | 5 | 4 | 3 |

X =1, Y= $\frac{11-1}{2}$, $\frac{10}{2}$, =5

X =3, Y= $\frac{11-3}{2}$, $\frac{8}{2}$, =4

X =5, Y= $\frac{11-5}{2}$, $\frac{6}{2}$, =3

-3y = -6 –2x, y = $\frac{6+2x}{3}$

| X | 0 | 3 | 6 |
|---|---|---|---|
| Y | 2 | 4 | 6 |

x =0, Y=$\frac{6+2 X 0}{3}$, $\frac{6+0}{3}$, $\frac{6}{3}$, =2

x =3, Y=$\frac{6+2 X 3}{3}$, $\frac{6+6}{3}$, $\frac{12}{3}$, =4

x =6, Y=$\frac{6+2 X 6}{3}$, $\frac{6+12}{3}$, $\frac{18}{3}$,=6



X = 3

Y = 4

## 3

Y - X = 2, Y =x + 2

| X | 0 | 1 | 2 |
|---|---|---|---|
| Y | 2 | 3 | 4 |

X=0, Y = 0 + 2, = 2

X=1, Y = 1 + 2, = 3

X=2, Y = 2 + 2, = 4

Y = 4 - x

| X | 0 | 1 | 2 |
|---|---|---|---|
| Y | 4 | 3 | 2 |

X = 0, Y = 4 – 0, = 4

X = 1, Y = 4 – 1, = 3

X = 2, Y = 4 – 2, = 2



X = 1

Y = 3

## ಅಭ್ಯಾಸಕ್ಕಾಗಿ ಲೆಕ್ಕಗಳು

ಈ ಸಮೀಕರಣಗಳನ್ನು ನಕ್ಷೆಯ ಮೂಲಕ ಬಿಡಿಸಿ:

| | | | |
|---|---|---|---|
| 1 | x + y = 5, | 2x + y = 8, | ( 3, 2 ) |
| 2 | x + y = 7, | x - y = 3 | ( 5, 2 ) |
| 3 | y = 10 - 2x | y = 6 - x | ( 4, 2 ) |
| 4 | 3x +2y =12, | x + 3y = 11 | ( 2, 3 ) |
| 5 | y = 3 - 2x, | x + 3y = -1 | ( 2, -1 ) |
| 6 | 2x – y – 2 = 0, | 2x + y – 6 = 0 | ( 2, 2 ) |
| 7 | 2x + y = 10, | 2x – y = 2 | ( 3, 4 ) |
| 8 | X + 2y = 7, | 2x + y = 8 | ( 3, 2 ) |


ಶಿಕ್ಷಕರ ಹೆಸರು : ರಾಮಕೃಷ್ಣ. ಡಿ.ಆರ್ 8867495355

| 5 | ತ್ರಿಭುಜಗಳ ಮೇಲಿನ ಪ್ರಮೇಯಗಳು | ನಿರೀಕ್ಷಿಸಬಹುದಾದ ಅಂಕಗಳು | 04 |
|---|---|---|---|

## ಥೇಲ್ಸ್‌ನ ಪ್ರಮೇಯ

ತ್ರಿಭುಜದ ಎರಡು ಬಾಹುಗಳನ್ನು ಎರಡು ಭಿನ್ನ ಬಿಂದುಗಳಲ್ಲಿ ಛೇದಿಸುವಂತೆ ಒಂದು ಬಾಹುವಿಗೆ ಸಮಾನಾಂತರವಾಗಿ ಎಳೆದ ಸರಳರೇಖೆಯು ಉಳಿದೆರಡು ಬಾಹುಗಳನ್ನು ಸಮಾನುಪಾತದಲ್ಲಿ ವಿಭಾಗಿಸುತ್ತದೆ




| | |
|---|---|
| ದತ್ತ : | ⊿ ABC ಯಲ್ಲಿ DE//BC |
| ಸಾಧನೀಯ | $\frac{AD}{BD} = \frac{AE}{CE}$ |
| ರಚನೆ : | D,C, ಮತ್ತು E,Bಗಳನ್ನು ಸೇರಿಸಿ.EL ⊥AB ಮತ್ತು DN ⊥AC ರಚಿಸಿ. |

ಸಾಧನೆ:

$$\frac{\triangle ADE}{\triangle BDE} = \frac{\frac{1}{2} AD X LE}{\frac{1}{2} BD X LE}$$

$$\therefore \frac{\triangle ADE}{\triangle BDE} = \frac{AD}{DB} \text{ ----------1}$$

$$\frac{\triangle ADE}{\triangle BDE} = \frac{\frac{1}{2} AE X DN}{\frac{1}{2} EC X DN}$$

$$\therefore \frac{\triangle ADE}{\triangle BDE} = \frac{AE}{EC} \text{ ----------2}$$

$$\therefore \frac{AD}{DB} = \frac{AE}{EC}$$

## (ಕೋ.ಕೋ.ಕೋ AAA) ನಿರ್ಧಾರಕ ಗುಣ

ಎರಡು ತ್ರಿಭುಜಗಳಲ್ಲಿ ಅನುರೂಪ ಕೋನಗಳು ಸಮವಾದರೆ ಅವುಗಳ ಅನುರೂಪ ಬಾಹುಗಳ ಅನುಪಾತಗಳು ಸಮ ಆದ್ದರಿಂದ ಆ ತ್ರಿಭುಜಗಳು ಸಮರೂಪವಾಗಿರುತ್ತವೆ.




| | |
|---|---|
| ದತ್ತ : | ⊿ABC ಮತ್ತು ⊿DEF ಗಳಲ್ಲಿ ∠A = ∠D, ∠B = ∠E , ∠C = ∠F |
| ಸಾಧನೀಯ | $\frac{AB}{DE} = \frac{BC}{EF} = \frac{AC}{DF}$ |
| ರಚನೆ : | AG=DE ಮತ್ತು AH=DF ಇರುವಂತೆ G, H ಗಳನ್ನು ಗುರುತಿಸಿ ಸೇರಿಸಿ |

ಸಾಧನೆ: ∠A = ∠D , AG=DE, AH =DF

∴ ⊿AGH ≅ ⊿DEF

∴ GH = EF, ∠G = ∠E

∠G = ∠E = ∠B ∴GH // EF

$$\therefore \frac{AB}{AG} = \frac{BC}{GH} = \frac{AC}{AH}$$

$$\therefore \frac{AB}{DE} = \frac{BC}{EF} = \frac{AC}{DF}$$

## ಪೈಥಾಗೊರಸ್‌ನ ಪ್ರಮೇಯ

ಒಂದು ಲಂಬಕೋನ ತ್ರಿಭುಜದಲ್ಲಿ ವಿಕರ್ಣದ ಮೇಲಿನ ವರ್ಗವು ಉಳಿದೆರಡು ಬಾಹುಗಳ ಮೇಲಿನ ವರ್ಗಗಳ ಮೊತ್ತಕ್ಕೆ ಸಮ (ಪೈಥಾಗೊರಸ್‌ನ ಪ್ರಮೇಯ).




| | |
|---|---|
| ದತ್ತ : | ⊿ ABC ಯಲ್ಲಿ ∠A = 90° |
| ಸಾಧನೀಯ : | $AB^2 + AC^2 = BC^2$ |
| ರಚನೆ : | AD ⊥ BC ರಚಿಸಿ. |

ಸಾಧನೆ:

| DABBA (DA B B AC) | DACCA (DA C C AB) |
|---|---|
| ⊿DAB ಮತ್ತು ⊿BAC ಗಳಲ್ಲಿ | ⊿DAC ಮತ್ತು ⊿CAB ಗಳಲ್ಲಿ |
| ∠D = ∠A =90° ದತ್ತ & ರಚನೆ | ∠D=∠A=90° ದತ್ತ & ರಚನೆ |
| ∠B = ∠B ಉಭಯ ಸಾಮಾನ್ಯ | ∠C = ∠C ಉಭಯ ಸಾಮಾನ್ಯ |
| ∠A = ∠C | ∠A = ∠B |
| ∴ ⊿ DAB ~ ⊿ BAC | ∴ ⊿ DAC ~ ⊿ CAB |
| $\Rightarrow \frac{DB}{BA} = \frac{AB}{BC}$ | $\Rightarrow \frac{DC}{CA} = \frac{AC}{CB}$ |
| $AB^2$ = DB . BC.........1) | $AC^2$ = DC . CB.......2) |

(1) + (2) == $AB^2 + AC^2$ = ( DB . BC ) + ( DC . CB )

$$AB^2 + AC^2 = BC^2$$

## ಸಮರೂಪ ತ್ರಿಭುಜಗಳ ವಿಸ್ತೀರ್ಣಗಳ ಮೇಲಿನ ಪ್ರಮೇಯ

ಎರಡು ಸಮರೂಪ ತ್ರಿಭುಜಗಳ ವಿಸ್ತೀರ್ಣಗಳ ಅನುಪಾತವು ಅವುಗಳ ಅನುರೂಪ ಬಾಹುಗಳ ವರ್ಗಗಳ ಅನುಪಾತಕ್ಕೆ ಸಮ.




| | |
|---|---|
| ದತ್ತ : | ⊿ ABC ~ ⊿ DEF , $\frac{AB}{DE} = \frac{BC}{EF} = \frac{AC}{DF}$ |
| ಸಾಧನೀಯ | $\frac{\triangle ABC}{\triangle DEF} = \frac{BC^2}{EF^2}$ |
| ರಚನೆ : | AL ⊥ BC ಮತ್ತು DM ⊥EF ರಚಿಸಿ. |

ಸಾಧನೆ: ⊿ABL ಮತ್ತು ⊿DEM ಗಳಲ್ಲಿ

∠B = ∠E ದತ್ತ

∠L = ∠M = 90° ರಚನೆ

∴ ⊿ ABL ~ ⊿ DEM

$$\therefore \frac{AB}{DE} = \frac{AL}{DM} \quad \Rightarrow \frac{AL}{DM} = \frac{BC}{EF}$$

$$\therefore \frac{\triangle ABC}{\triangle DEF} = \frac{\frac{1}{2} BC X AL}{\frac{1}{2} EF X DM}$$

$$\frac{\triangle ABC}{\triangle DEF} = \frac{BC^2}{EF^2}$$

ಶಿಕ್ಷಕರ ಹೆಸರು : ರಾಮಕೃಷ್ಣ. ಡಿ.ಆರ್ 8867495355

**ಸರ್ಕಾರಿ ಪ್ರೌಢಶಾಲೆ ಜಡಿಗೇನಹಳ್ಳಿ, ಹೊಸಕೋಟೆ ತಾ॥ ಬೆಂಗಳೂರು ಗ್ರಾಮಾಂತರ ಜಿಲ್ಲೆ**

**2018-19 ನೇ ಸಾಲಿನ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗಾಗಿ ಕ್ರಿಯಾಯೋಜನೆ.**

| 6 | ವೃತ್ತಗಳ ಮೇಲಿನ ಪ್ರಮೇಯಗಳು | ನಿರೀಕ್ಷಿಸಬಹುದಾದ ಅಂಕಗಳು | 03 |
|---|---|---|---|

**ಬಾಹ್ಯಬಿಂದುವಿನಿಂದ ವೃತ್ತಕ್ಕೆ ಎಳೆದ ಸ್ಪರ್ಶಕ ಗಳ ಉದ್ದವು ಸಮವಾಗಿರುತ್ತದೆ ಎಂದು ಸಾಧಿಸಿ.**




| | |
|---|---|
| ದತ್ತ : | A & B ವೃತ್ತ ಕೇಂದ್ರಗಳು, B P ಮತ್ತು B Q ಸ್ಪರ್ಶಕಗಳು |
| ಸಾಧನೀಯ | BP = BQ |
| ಸಾಧನೆ : | △APB ಮತ್ತು △AQB ಗಳಲ್ಲಿ<br>∠P = ∠Q = 90°<br>AB = AB<br>AP = AQ<br>(ಒಂದೇ ವೃತ್ತದ ತ್ರಿಜ್ಯಗಳು)<br>∴ △APB ≅ △AQB<br>∴ BP = BQ |

**ವೃತ್ತದ ಮೇಲಿನ ಯಾವುದೇ ಬಿಂದುವಿನಲ್ಲಿ ಎಳೆದ ಸ್ಪರ್ಶಕವು ಸ್ಪರ್ಶ ಬಿಂದುವಿನಲ್ಲಿ ಎಳೆದ ತ್ರಿಜ್ಯಕ್ಕೆ ಲಂಬವಾಗಿರುತ್ತದೆ ಎಂದು ಸಾಧಿಸಿ.**




| | |
|---|---|
| ದತ್ತ : | O ವೃತ್ತ ಕೇಂದ್ರ ,<br>XY ಸ್ಪರ್ಶಕ ಮತ್ತು OP ತ್ರಿಜ್ಯ . |
| ಸಾಧನೀಯ | OP ⊥ XY |
| ರಚನೆ : | P ಯನ್ನು ಹೊರತುಪಡಿಸಿ, XY ಮೇಲೆ ಮತ್ತೊಂದು ಬಿಂದು Q ಗುರ್ತಿಸಿ ಮತ್ತು OQ ನ್ನು ಸೇರಿಸಿ. |
| ಸಾಧನೆ : | OP = OR (ಒಂದೇ ವೃತ್ತದ ತ್ರಿಜ್ಯಗಳು)<br>OQ = OR + RQ OQ > OR<br>OQ > OP (OP = OR )<br>OP ಯು O ನಿಂದ XY ಸ್ಪರ್ಶಕಕ್ಕೆ ಕನಿಷ್ಠ ದೂರವಾಗಿದೆ . ∴ OP ⊥ XY |

| 7 | ವರ್ಗಸಮೀಕರಣಗಳು | ನಿರೀಕ್ಷಿಸಬಹುದಾದ ಅಂಕಗಳು | 03 |
|---|---|---|---|

**ಸೂತ್ರದ ಸಹಾಯದಿಂದ ಒಂದು ವರ್ಗಸಮೀಕರಣವನ್ನು ಬಿಡಿಸುವುದು:**

$2x^2 - 3x + 5 = 0$

$ax^2 + bx + c = 0$ >a=2, b=-3, c=5

$$x = \frac{-b\pm\sqrt{b^2-4ac}}{2a},$$

$$x = \frac{+3 \pm \sqrt{(-3)^2 - 4X2X5}}{2X2}$$

$$x = \frac{3\pm\sqrt{9-40}}{4}$$

$$x = \frac{3\pm\sqrt{-31}}{4}$$

**ಅಭ್ಯಾಸಕ್ಕಾಗಿ ಲೆಕ್ಕಗಳು**

**ಸೂತ್ರದಿಂದ ಬಿಡಿಸಿ &ಸ್ವಭಾವವನ್ನು ವಿವೇಚಿಸಿ**

| | |
|---|---|
| 1 | $x^2 - 2x + 5 = 0$ |
| 2 | $3x^2 + x - 2 = 0$ |
| 3 | $2x^2 + 4x = 2$ |
| 4 | $5x^2 + 4x = 1$ |

**ವರ್ಗ ಸಮೀಕರಣದ ಮೂಲಗಳ ಸ್ವಭಾವ**

| | |
|---|---|
| 1 | $b^2 - 4ac > 0$ (+) ಮೂಲಗಳು ವಾಸ್ತವ ಮತ್ತು ಭಿನ್ನವಾಗಿರುತ್ತವೆ |
| 2 | $b^2 - 4ac = 0$ ಮೂಲಗಳು ವಾಸ್ತವ ಮತ್ತು ಸಮವಾಗಿರುತ್ತವೆ |
| 3 | $b^2 - 4ac < 0$ (-) ವಾಸ್ತವ ಮೂಲಗಳನ್ನು ಹೊಂದಿಲ್ಲ. |

**ವರ್ಗ ಸಮೀಕರಣದ ಮೂಲ ಗಳ ಸ್ವಭಾವವನ್ನು ವಿವೇಚಿಸಿ.**

$2x^2 - 4x + 3 = 0$

$ax^2 + bx + c = 0$

a=2, b=-4, c=3

$= b^2 - 4ac$

$= (-4)^2 - 4(2)(3)$

$= 16 - 24$

$= -8 < 0$ ∴ ವಾಸ್ತವ ಮೂಲಗಳನ್ನು ಹೊಂದಿಲ್ಲ

**ಸಮೀಕರಣವು ಸಮಾನಾದವಾಸ್ತವ ಮೂಲಗಳನ್ನು ಹೊಂದಿದ್ದರೆ k ಯ ಬೆಲೆಯನ್ನು ಕಂಡುಹಿಡಿಯಿರಿ.**

$2x^2 - kx + 3 = 0$

$ax^2 + bx + c = 0$

a = 2, b = -k , c = 3

ಮೂಲಗಳು ವಾಸ್ತವ ಮತ್ತು ಸಮ

∴ $b^2 - 4ac = 0$

$(-k)^2 - 4(2)(3) = 0$

$k^2 = 24$

$k = \pm\sqrt{24}$

ಸಮಾನಾದವಾಸ್ತವ ಮೂಲಗಳನ್ನು ಹೊಂದಿದ್ದರೆ k ಯ ಬೆಲೆಯನ್ನು ಕಂಡುಹಿಡಿಯಿರಿ.

| | | | |
|---|---|---|---|
| 1 | $2x^2 + kx + 3 = 0$ | 2 | $kx(k - 2) + 6 = 0$ |

ಶಿಕ್ಷಕರ ಹೆಸರು : ರಾಮಕೃಷ್ಣ. ಡಿ.ಆರ್ 8867495355

ಸರ್ಕಾರಿ ಪ್ರೌಢಶಾಲೆ ಜಡಿಗೇನಹಳ್ಳಿ, ಹೊಸಕೋಟೆ ತಾ।। ಬೆಂಗಳೂರು ಗ್ರಾಮಾಂತರ ಜಿಲ್ಲೆ

2018-19 ನೇ ಸಾಲಿನ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗಾಗಿ ಕ್ರಿಯಾಯೋಜನೆ.

| 8 | ಸಂಖ್ಯಾಶಾಸ್ತ್ರ | ನಿರೀಕ್ಷಿಸಬಹುದಾದ ಅಂಕಗಳು | 03 |
|---|---|---|---|

## ಸರಾಸರಿಯನ್ನು ಕಂಡುಹಿಡಿಯಿರಿ.

"ನೇರ ವಿಧಾನ"

| ವರ್ಗಾಂತರ | ಆವೃತ್ತಿ f | ಮಧ್ಯ ಬಿಂದು x | fx |
|---|---|---|---|
| 5 -15 | 2 | 10 | 20 |
| 15 -25 | 3 | 20 | 60 |
| 25 -35 | 6 | 30 | 180 |
| 35 -45 | 5 | 40 | 200 |
| 45 -55 | 4 | 50 | 200 |
| N =20 | | $\sum fx = 660$ | |

ಸರಾಸರಿ $= \frac{\sum fx}{N} = \frac{660}{20} = 33$

## ಮಧ್ಯಾಂಕವನ್ನು ಕಂಡುಹಿಡಿಯಿರಿ.

| ವರ್ಗಾಂತರ | ಆವೃತ್ತಿ f | ಸಂಚಿತ ಆವೃತ್ತಿ cf |
|---|---|---|
| 30 - 40 | 5 | 5 (1 – 5) |
| 40 - 50 | 9 | 14 cf (6 – 14) |
| 50 - 60 | 12 f | 26 (15 – 26) |
| 60 - 70 | 8 | 34 (27 – 34) |
| 70 - 80 | 6 | 40 (35 – 40) |
| N = 40 | | |

ಮಧ್ಯಾಂಕ $= L + [\frac{\frac{N}{2} - cf}{f}] X h$

L = 50

$\frac{N}{2} = \frac{40}{2} = 20$

Cf = 14 , f = 12, h = 10

ಮಧ್ಯಾಂಕ $= L + [\frac{\frac{N}{2} - cf}{f}] Xh$

ಮಧ್ಯಾಂಕ $= 50 + [\frac{20-14}{12}] x10$

ಮಧ್ಯಾಂಕ $= 50 + [\frac{6}{12}] X10$

ಮധ್ಯಾಂಕ = 50 + 5

ಮಧ್ಯಾಂಕ = 55

## ಬಹುಲಕವನ್ನು ಕಂಡುಹಿಡಿಯಿರಿ.

| ವರ್ಗಾಂತರ | ಆವೃತ್ತಿ f |
|---|---|
| 10 - 20 | 5 |
| 20 - 30 | 6 ($f_0$) |
| L30 - 40 | 10 ( $f_1$) |
| 40 - 50 | 4 ($f_2$) |
| 50 - 60 | 3 |

L = 30

$f_0 = 6$

$f_1 = 10$

$f_2 = 4$

h = 10

ಬಹುಲಕ $= l + [\frac{f1-f0}{2f1-f0-f2}] Xh$

ಬಹುಲಕ $= 30 + [\frac{10-6}{2x10-6-4}] X10$

ಬಹುಲಕ $= 30 + [\frac{4}{10}] X10$ , = 30+4 = 34

## ಅಭ್ಯಾಸಕ್ಕಾಗಿ ಲೆಕ್ಕಗಳು

ಸರಾಸರಿ , ಬಹುಲಕ ಮತ್ತು ಮಧ್ಯಾಂಕಗಳನ್ನು ಕಂಡುಹಿಡಿಯಿರಿ.

| 1 | | 2 | | 3 | |
|---|---|---|---|---|---|
| ವರ್ಗಾಂತರ | ಆವೃತ್ತಿ f | ವರ್ಗಾಂತರ | ಆವೃತ್ತಿ f | ವರ್ಗಾಂತರ | ಆವೃತ್ತಿ f |
| 0 - 20 | 3 | 5 - 15 | 1 | 5 - 10 | 1 |
| 20 - 40 | 4 | 15 --25 | 2 | 10 - 15 | 3 |
| 40 - 60 | 8 | 25 - 35 | 2 | 15 - 25 | 10 |
| 60 - 80 | 3 | 35 - 45 | 3 | 25 - 35 | 3 |
| 80 - 100 | 2 | 45 - 55 | 1 | 35 - 45 | 2 |
| | | 55 - 65 | 1 | 45 - 55 | 1 |

## 'ಅಂದಾಜು ಸರಾಸರಿ ವಿಧಾನ'

| ವರ್ಗಾಂತರ | ಆವೃತ್ತಿ f | ಮಧ್ಯಬಿಂದು x | d= x - a | fd |
|---|---|---|---|---|
| 5 -15 | 2 | 10 | 10 -30 = -20 | -40 |
| 15 -25 | 3 | 20 | 20 -30 = -10 | -30 |
| 25 -35 | 6 | 30 | 30 -30 = 0 | 00 |
| 35 -45 | 5 | 40 | 40 -30 = 10 | 50 |
| 45 -55 | 4 | 50 | 50 -30 = 20 | 80 |
| | N =20 | | $\sum fd = 60$ | |

ಅಂದಾಜು ಸರಾಸರಿ- a=30

ಸರಾಸರಿ $= a + \frac{\sum fd}{N} = 30 + \frac{60}{20} =$ 30+3 = 33

## 'ಹಂತ ವಿಚಲನಾ' ವಿಧಾನ

| ವರ್ಗಾಂತರ | ಆವೃತ್ತಿ f | ಮಧ್ಯಬಿಂದು x | d= x - a | u | fu |
|---|---|---|---|---|---|
| 5 -15 | 2 | 10 | 10 -30 =-20 | -2 | -4 |
| 15 -25 | 3 | 20 | 20 -30 =-10 | -1 | -3 |
| 25 -35 | 6 | 30 | 30 -30 = 0 | 0 | 0 |
| 35 -45 | 5 | 40 | 40 -30 =10 | 1 | 5 |
| 45 -55 | 4 | 50 | 50 -30 =20 | 2 | 8 |
| N =20 | | | $\sum fu = 6$ | | |

ಅಂದಾಜು ಸರಾಸರಿ-a= 30

ಸರಾಸರಿ $= a + \frac{\sum fu}{N} Xh$, $= 30 + \frac{6}{20} x10$, = 30+3 =33

ಶಿಕ್ಷಕರ ಹೆಸರು : ರಾಮಕೃಷ್ಣ. ಡಿ.ಆರ್ 8867495355

| | | | |
|---|---|---|---|
| 9 | ತ್ರಿಭುಜದ ವಿಸ್ತೀರ್ಣ $=\frac{1}{2}\{x_1 (y_2 - y_3)+ x_2 (y_3 - y_1)+ x_3 (y_1 - y_2)\}$ | ನಿರೀಕ್ಷಿಸಬಹುದಾದ ಅಂಕಗಳು | 02 |

**1** ಶೃಂಗಬಿಂದುಗಳು (1, -1), (-4, 6) ಮತ್ತು (-3, -5) ಆಗಿರುವ ತ್ರಿಭುಜದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

(1 , -1), (-4 , 6) ಮತ್ತು (-3 , -5)

$(X_1 , Y_1)$, $(X_2 , Y_2)$ $(X_3 , Y_3)$

ತ್ರಿಭುಜದ ವಿಸ್ತೀರ್ಣ

$=\frac{1}{2}\{x_1 (y_2 - y_3)+ x_2 (y_3 - y_1)+ x_3 (y_1 - y_2)\}$

$=\frac{1}{2}[1 (6 + 5) + (-4) (-5 + 1) + (3) (-1-6)]$

$=\frac{1}{2}(11 + 16 + 21)$ = 24 ಮಾನಗಳು.

ತ್ರಿಭುಜದ ವಿಸ್ತೀರ್ಣವು 24 ಚದರ ಮಾನಗಳು.

**2** A (2 ,6), B (4, k) ಮತ್ತು ಅ (6, -2) ಎಂಬ ಬಿಂದುಗಳು ಸರಳರೇಖಾಗತವಾಗಿದ್ದರೆ k ಯ ಬೆಲೆಯನ್ನು ಕಂಡುಹಿಡಿಯಿರಿ.

ಪರಿಹಾರ: ಬಿಂದುಗಳು ಸರಳ ರೇಖಾಗತ ವಾಗಿರುವುದರಿಂದ, ತ್ರಿಭುಜದವಿಸ್ತೀರ್ಣವು 0 ಯಾಗಿರಲೇಬೇಕು.

(2 , 6), (4 , k) ಮತ್ತು ( 6 , -2)

$(X_1 , Y_1)$, $(X_2 , Y_2)$ $(X_3 , Y_3)$

ತ್ರಿಭುಜದ ವಿಸ್ತೀರ್ಣ

$\frac{1}{2}\{x_1 (y_2 - y_3)+ x_2 (y_3 - y_1)+ x_3 (y_1 - y_2)\}= 0$

$\frac{1}{2}[2 (k + 2) +4 (-2 -6) +6 (6 - k)] = 0$

$[2 (k + 2) +4 (-8) +6 (6 - k)] = 0$

$2k + 4 – 32 + 36 – 6k = 0$

$-8k + 8 = 0$

$K = 1$

**3** A (-5, 7), B (-4, -5) C (-1, -6) ಮತ್ತು D (4, 5) ಒಂದು ಚತುರ್ಭುಜದ ಶೃಂಗಬಿಂದುಗಳಾದರೆ, ABCDಚತುರ್ಭುಜದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

B ಯನ್ನು D ಗೆ ಸೇರಿಸುವುದರಿಂದ, ನಿಮಗೆ ABD ಮತ್ತು BCDಎಂಬ ಎರಡು ತ್ರಿಭುಜಗಳು ದೊರೆಯುತ್ತವೆ.

ಈಗ, ΔABD ಯ ವಿಸ್ತೀರ್ಣ =

A(-5 , 7), B(-4 ,-5) ಮತ್ತು D ( 4 , 5)

$(X_1 , Y_1)$, $(X_2 , Y_2)$ $(X_3 , Y_3)$

ತ್ರಿಭುಜದ ವಿಸ್ತೀರ್ಣ

$=\frac{1}{2}\{x_1 (y_2 - y_3)+ x_2 (y_3 - y_1)+ x_3 (y_1 - y_2)\}$

$=\frac{1}{2}[-5 (-5 -5) +(-4) (5 - 7) +4 (7 + 5)]$

$=\frac{1}{2}[50 + 8 + 48] = = \frac{1}{2} X106$

= 53 ಚದರ ಮಾನಗಳು.

ಹಾಗೂ, ΔBCD ಯ ವಿಸ್ತೀರ್ಣ =

$=\frac{1}{2}\{x_1 (y_2 - y_3)+ x_2 (y_3 - y_1)+ x_3 (y_1 - y_2)\}$

$=\frac{1}{2}[-4 (-6 -5) -1 (5 + 5) +4 (-5 + 6)]$

$=\frac{1}{2}[44 - 10 + 4]$ $=\frac{1}{2} X 38$

=19 ಚದರ ಮಾನಗಳು

ಆದ್ದರಿಂದ, ಚತುರ್ಭುಜ ABCD ಯ ವಿಸ್ತೀರ್ಣ =

= 53 + 19 = 72 ಚದರ ಮಾನಗಳು.

## ಅಭ್ಯಾಸಕ್ಕಾಗಿ ಲೆಕ್ಕಗಳು

| | |
|---|---|
| 1 | ತ್ರಿಭುಜಗಳ ವಿಸ್ತೀರ್ಣಗಳನ್ನು ಕಂಡುಹಿಡಿಯಿರಿ i) (2, 3),(-1, 0),(2, -4) ii) (-5, -1), (3, -5) (5, 2) |
| 2 | ಸರಳರೇಖಾಗತವಾಗಿದ್ದರೆ k ಯ ಬೆಲೆಯನ್ನು ಕಂಡುಹಿಡಿಯಿರಿ. i) (2, 3), (6,-3), (4, k) ii) (8, 1), (k, -4) (2, -5) |
| 3 | (0, 1), (2, 1) ಮತ್ತು (0, 3) ಶೃಂಗಬಿಂದುಗಳನ್ನು ಹೊಂದಿರುವ ತ್ರಿಭುಜದ ಬಾಹುಗಳ ಮಧ್ಯಬಿಂದುಗಳನ್ನು ಸೇರಿಸಿದಾಗ ಉಂಟಾಗುವ ತ್ರಿಭುಜದ ವಿಸ್ತೀರ್ಣವನ್ನು ಕಂಡುಹಿಡಿಯಿರಿ. |
| 4 | ಚತುರ್ಭುಜದ ಅನುಕ್ರಮ ಶೃಂಗಗಳು (1 , 2), (3, 5), (6, 4) ಮತ್ತು (5, 1) ಆದರ ವಿಸ್ತೀರ್ಣವನ್ನು ಕಂಡುಹಿಡಿಯಿರಿ. |


ಶಿಕ್ಷಕರ ಹೆಸರು : ರಾಮಕೃಷ್ಣ. ಡಿ.ಆರ್ 8867495355

| 10 | ಶೂನ್ಯತೆಗಳ ಮೊತ್ತ ಹಾಗೂ ಗುಣಲಬ್ಧಗಳು | ನಿರೀಕ್ಷಿಸಬಹುದಾದ ಅಂಕಗಳು | 02 |
|---|---|---|---|

**1** ಶೂನ್ಯತೆಗಳ ಸಂಖ್ಯೆಯನ್ನು ಕಂಡುಹಿಡಿಯಿರಿ.




ಶೂನ್ಯತೆಗಳ ಸಂಖ್ಯೆ = 1




ಶೂನ್ಯತೆಗಳ ಸಂಖ್ಯೆ = 3

1. **ಬಹುಪದೋಕ್ತಿ** $= ax^2 + bx + c$
2. ಶೂನ್ಯತೆಗಳ ಮೊತ್ತ $= \alpha + \beta = \frac{-b}{a}$
3. ಶೂನ್ಯತೆಗಳ ಗುಣಲಬ್ಧ $= \alpha \times \beta = \frac{c}{a}$

**2** ಶೂನ್ಯತೆಗಳ ಮೊತ್ತ ಹಾಗೂ ಗುಣಲಬ್ಧಗಳು –3 ಮತ್ತು 2 ಆಗಿರುವ ಒಂದು ವರ್ಗ ಬಹುಪದೋಕ್ತಿಯನ್ನು ಕಂಡುಹಿಡಿಯಿರಿ

ಶೂನ್ಯತೆಗಳ ಮೊತ್ತ $= \alpha + \beta = -3 = \frac{-3}{1} = \frac{-b}{a}$

ಶೂನ್ಯತೆಗಳ ಗುಣಲಬ್ಧ $= \alpha \times \beta = 2 = \frac{2}{1} = \frac{c}{a}$

$a = 1$ ಆದರೆ, ಆಗ $b = 3$ ಮತ್ತು $c = 2$

ಬಹುಪದೋಕ್ತಿ $= ax^2 + bx + c$

ಬಹುಪದೋಕ್ತಿ $= 1x^2 + 3x + 2$

**3** ಶೂನ್ಯತೆಗಳ ಮೊತ್ತ ಹಾಗೂ ಗುಣಲಬ್ಧಗಳು ಕ್ರಮವಾಗಿ $\frac{1}{4}$ ಮತ್ತು $\frac{3}{4}$ ಆಗಿರುವ ಒಂದು ವರ್ಗ ಬಹುಪದೋಕ್ತಿಯನ್ನು ಕಂಡುಹಿಡಿಯಿರಿ.

ಶೂನ್ಯತೆಗಳ ಮೊತ್ತ $= \alpha + \beta = \frac{1}{4} = \frac{-(-1)}{4} = \frac{-b}{a}$

ಶೂನ್ಯತೆಗಳ ಗುಣಲಬ್ಧ $= \alpha \times \beta = \frac{3}{4} = \frac{3}{4} = \frac{c}{a}$

$a = 4$ ಆದರೆ, ಆಗ $b = -1$ ಮತ್ತು $c = 3$

ಬಹುಪದೋಕ್ತಿ $= ax^2 + bx + c$

ಬಹುಪದೋಕ್ತಿ $= 4x^2 - 1x + 3$

**ಅಭ್ಯಾಸಕ್ಕಾಗಿ ಲೆಕ್ಕಗಳು**

ಈ ಕೆಳಗಿನವುಗಳನ್ನು ಕ್ರಮವಾಗಿ ಶೂನ್ಯತೆಗಳ ಮೊತ್ತ ಹಾಗೂ ಗುಣಲಬ್ಧವನ್ನಾಗಿ ಹೊಂದಿರುವ ವರ್ಗ ಬಹುಪದೋಕ್ತಿಯನ್ನು ಕಂಡುಹಿಡಿಯಿರಿ.

| | | | | | |
|---|---|---|---|---|---|
| i) $(\frac{1}{4}, -1)$ | ii) $(\sqrt{2}, \frac{1}{3})$ | iii) $(0, \sqrt{5})$ | iv) $(1, 1)$ | v) $(\frac{1}{4}, -\frac{1}{4})$ | vi) $(4, 1)$ |

---

| 11 | ಅಭಾಗಲಬ್ಧ ಸಂಖ್ಯೆ ಎಂದು ಸಾದಿಸಿ. | ನಿರೀಕ್ಷಿಸಬಹುದಾದ ಅಂಕಗಳು | 02 |
|---|---|---|---|

**$5 - \sqrt{3}$ ಅಭಾಗಲಬ್ಧ ಸಂಖ್ಯೆ ಎಂದು ಸಾದಿಸಿ**

$5 - \sqrt{3}$ ಒಂದು ಭಾಗಲಬ್ಧ ಸಂಖ್ಯೆಯಾಗಿರಲಿ

$5 - \sqrt{3} = \frac{p}{q}$

$-\sqrt{3} = \frac{p}{q} - 5$

ಭಾಗಲಬ್ಧ ಸಂಖ್ಯೆ = ಭಾಗಲಬ್ಧ ಸಂಖ್ಯೆ

ಅದರೆ $\sqrt{3}$ ಒಂದು ಅಭಾಗಲಬ್ಧಸಂಖ್ಯೆ

∴ ನಮ್ಮ ಊಹೆ ತಪ್ಪು

∴ $5 - \sqrt{3}$ ಒಂದು ಅಭಾಗಲಬ್ಧ ಸಂಖ್ಯೆ.

**$3\sqrt{2}$ ಅಭಾಗಲಬ್ಧ ಸಂಖ್ಯೆ ಎಂದು ಸಾದಿಸಿ**

$3\sqrt{2}$ ಒಂದು ಭಾಗಲಬ್ಧ ಸಂಖ್ಯೆಯಾಗಿರಲಿ

$3\sqrt{2} = \frac{p}{q}$

$\sqrt{2} = \frac{p}{3q}$

ಭಾಗಲಬ್ಧ ಸಂಖ್ಯೆ = ಭಾಗಲಬ್ಧ ಸಂಖ್ಯೆ

ಅದರೆ $\sqrt{2}$ ಒಂದು ಅಭಾಗಲಬ್ಧಸಂಖ್ಯೆ

∴ ನಮ್ಮ ಊಹೆ ತಪ್ಪು

∴ $3\sqrt{2}$ ಒಂದು ಅಭಾಗಲಬ್ಧ ಸಂಖ್ಯೆ.

**$\sqrt{2}$ ಅಭಾಗಲಬ್ಧ ಸಂಖ್ಯೆಎಂದು ಸಾಧಿಸಿ**

$\sqrt{2}$ ಒಂದು ಭಾಗಲಬ್ಧ ಸಂಖ್ಯೆಯಾಗಿರಲಿ

$\sqrt{2} = \frac{p}{q}$ p & q ಅವಿಭಾಜ್ಯಗಳು

$2 = \frac{p2}{q2}$

$p^2$, $q^2$ ನ್ನು ಭಾಗಿಸುತ್ತದೆ.

p, q ನ್ನು ಭಾಗಿಸುತ್ತದೆ.

∴ ನಮ್ಮ ಊಹೆ ತಪ್ಪು

∴ $\sqrt{2}$ ಒಂದು ಅಭಾಗಲಬ್ಧ ಸಂಖ್ಯೆ.

**ಅಭ್ಯಾಸಕ್ಕಾಗಿ ಲೆಕ್ಕಗಳು**

ಅಭಾಗಲಬ್ಧ ಸಂಖ್ಯೆ ಎಂದು ಸಾದಿಸಿ. (i) $2+\sqrt{5}$ (ii) $\sqrt{3} - 2$ (iii) $7\sqrt{5}$ (iv) $\sqrt{5}$

| 12 | ಸಂಭವನೀಯತೆ | ನಿರೀಕ್ಷಿಸಬಹುದಾದ ಅಂಕಗಳು | 03 |
|---|---|---|---|

**1** ಒಂದು ಪೆಟ್ಟಿಗೆಯಲ್ಲಿ 3 ನೀಲಿ, 2 ಬಿಳಿ ಮತ್ತು 4 ಕೆಂಪು ಗೋಲಿಗಳಿವೆ. ಪೆಟ್ಟಿಗೆಯಿಂದ ಯಾದೃಚ್ಛಿಕವಾಗಿ ಒಂದು ಗೋಲಿಯನ್ನು ತೆಗೆದರೆ, ಅದು

(i) ಬಿಳಿ (ii) ನೀಲಿ (iii) ಕೆಂಪು ಆಗಿರುವ ಸಂಭವನೀಯತೆಯು ಎಷ್ಟು ?

ಒಟ್ಟು ಫಲಿತಗಳ ಸಂಖ್ಯೆ n(s) = 3+2+4 = n(s) = 9

ಗೋಲಿ ಬಿಳಿಯಾಗಿರುವ ಫಲಿತಗಳ ಸಂಖ್ಯೆ n( w) =2

ಗೋಲಿ ಬಿಳಿಯಾಗಿರುವ ಸಂಭವನೀಯತೆ $=\frac{n(W)}{n(s)}=\frac{2}{9}$

ಗೋಲಿ ನೀಲಿಯಾಗಿರುವ ಫಲಿತಗಳ ಸಂಖ್ಯೆ = n( b) =3

ಗೋಲಿ ನೀಲಿಯಾಗಿರುವ ಸಂಭವನೀಯತೆ $=\frac{n(b)}{n(s)}=\frac{3}{9}$

ಗೋಲಿ ಕೆಂಪಾಗಿರುವವ ಫಲಿತಗಳ ಸಂಖ್ಯೆ n( R) =4

ಗೋಲಿ ಕೆಂಪಾಗಿರುವ ಸಂಭವನೀಯತೆ $=\frac{n(R)}{n(s)}=\frac{4}{9}$

**2** ಆಟದಲ್ಲಿ ಒಂದು (ಬಾಣವು) ಚಕ್ರಾಕಾರವಾಗಿ ತಿರುಗಿ 1, 2, 3, 4, 5, 6, 7, 8 ಈ ಅಂಕಿಗಳಲ್ಲಿ ಯಾವುದಾದರೂ ಒಂದು ಅಂಕಿಯನ್ನು ಸೂಚಿಸುವಂತೆ ನಿಶ್ಚಲವಾಗುತ್ತದೆ, ಸೂಚಕವು

(i) 8 (ii)ಬೆಸಸಂಖ್ಯೆ (iii) 2 ಕ್ಕಿಂತ ದೊಡ್ಡದಾದ ಸಂಖ್ಯೆ (iv) 9 ಕ್ಕಿಂತ ಚಿಕ್ಕದಾದ ಒಂದು ಸಂಖ್ಯೆ ಯನ್ನು ಸೂಚಿಸುವ ಸಂಭವನೀಯತೆ ಎಷ್ಟು.?




ಒಟ್ಟು ಫಲಿತಗಳ ಸಂಖ್ಯೆ n(s) = 8

(i) ಸಂಖ್ಯೆ 8 ಗಿರುವ ಸಂಭವನೀಯತೆ = p(A) = $\frac{n(A)}{n(s)}=\frac{1}{8}$

(ii) ಬೆಸ ಸಂಖ್ಯೆಯಾ ಸಂಭವನೀಯತೆ p(A) = $\frac{n(A)}{n(s)}=\frac{4}{8}$

(iii) 9 ಕ್ಕಿಂತ ಚಿಕ್ಕ ಸಂಖ್ಯೆಯ ಸಂಭವನೀಯತೆ= $\frac{n(A)}{n(s)}=\frac{8}{8}$

**4** ಒಂದು ದಾಳವನ್ನು ಒಂದು ಸಲ ಎಸೆಯಲಾಗಿದೆ.

(i) ಒಂದು ಅವಿಭಾಜ್ಯ ಸಂಖ್ಯೆ (ii) 2 ಮತ್ತು 6 ರ ನಡುವಿನ ಒಂದು ಸಂಖ್ಯೆ (iii) ಒಂದು ಬೆಸಸಂಖ್ಯೆಯನ್ನು ಪಡೆಯುವ ಸಂಭವನೀಯತೆಯನ್ನು ಕಂಡುಹಿಡಿಯಿರಿ.

ಒಟ್ಟು ಫಲಿತಗಳ ಸಂಖ್ಯೆ {1,2,3,4,5,6} = n(s) =6

(i) ಒಂದು ಅವಿಭಾಜ್ಯ ಸಂಖ್ಯೆಯಾಗಿರುವ ಸಂಭವನೀಯತೆ p(A) = $\frac{n(A)}{n(s)}=\frac{3}{6}$

(ii) 2 ಮತ್ತು 6 ರ ನಡುವಿನ ಒಂದು ಸಂಖ್ಯೆ ಯಾಗಿರುವ ಸಂಭವನೀಯತೆ = p(A) = $\frac{n(A)}{n(s)}=\frac{3}{6}$

(iii) ಒಂದು ಬೆಸಸಂಖ್ಯೆಯನ್ನು ಪಡೆಯುವ ಸಂಭವನೀಯತೆ p(A) = $\frac{n(A)}{n(s)}=\frac{3}{6}$

**4** ಒಂದು ಪೆಟ್ಟಿಗೆಯಲ್ಲಿ 1 ರಿಂದ 90 ರರೆಗಿನ ಸಂಖ್ಯೆಗಳು ನಮೂದಾಗಿರುವ 90 ಬಿಲ್ಲೆಗಳಿವೆ. ಪೆಟ್ಟಿಗೆಯಿಂದ ಒಂದು ಬಿಲ್ಲೆಯನ್ನು ಯಾದೃಚ್ಛಿಕವಾಗಿ ತೆಗೆದರೆ ಅದು

i) 2 ಅಂಕಿಯ ಒಂದು ಸಂಖ್ಯೆ (ii) ಒಂದು ಪೂರ್ಣವರ್ಗಸಂಖ್ಯೆ (iii) 5 ರಿಂದ ಭಾಗವಾಗುವ ಒಂದು ಸಂಖ್ಯೆಯನ್ನು ಹೊಂದಿರುವ ಸಂಬವನೀಯತೆಯನ್ನು ಕಂಡುಹಿಡಿಯಿರಿ.

ಒಟ್ಟು ಫಲಿತಗಳ ಸಂಖ್ಯೆ {1,2,3,4,5,.....90} = n(s) =90

(i) 2ಅಂಕಿಯ ಒಂದು ಸಂಖ್ಯೆಯಾಗಿರುವ ಸಂಭವನೀಯತೆ = p(A) = $\frac{n(A)}{n(s)}=\frac{80}{90}$

(ii) ಒಂದು ಪೂರ್ಣ ವರ್ಗಸಂಖ್ಯೆ ಯಾಗಿರುವ ಸಂಭವನೀಯತೆ = p(A) = $\frac{n(A)}{n(s)}=\frac{9}{90}$

(iii) 5 ರಿಂದ ಭಾಗವಾಗುವ ಒಂದು ಸಂಖ್ಯೆಯನ್ನು ಹೊಂದಿರುವ ಸಂಬವನೀಯತೆ=p(A) = $\frac{n(A)}{n(s)}=\frac{18}{90}$

**5** P(E) = 0.05ಆದರೆ E ಅಲ್ಲದಘಟನೆಯ ಸಂಭವನೀಯತೆ ಎಷ್ಟು

E ಅಲ್ಲದ' ಘಟನೆಯ ಸಂಭವನೀಯತೆ

= 1.0 – 0.05 = 0.95

**6** ಒಂದು ದಾಳವನ್ನು 2 ಸಲ ಎಸೆಯಲಾಗಿದೆ.

(i) ಎರಡೂ ಸಲ 5 ಮೇಲೆ ಬರದಿರುವ (ii) ಕನಿಷ್ಟ ಒಂದು ಸಲ 5 ಮೇಲೆ ಬರುವ ಸಂಭವನೀಯತೆಯು ಎಷ್ಟು?

ಒಟ್ಟು ಫಲಿತಗಳ ಸಂಖ್ಯೆ = n(s) 36

(1,1), (1,2), (1,3), (1,4), (1,5), (1,6)
(2,1), (2,2), (2,3), (2,4), (2,5), (2,6)
(3,1), (3,2), (3,3), (3,4), (3,5), (3,6)
(4,1), (4,2), (4,3), (4,4), (4,5), (4,6)
(5,1), (5,2), (5,3), (5,4), (5,5), (5,6)
(6,1), (6,2), (6,3), (6,4), (6,5), (6,6)

(i) ಎರಡೂ ಸಲ 5 ಮೇಲೆ ಬರದಿರುವ ಸಂಭವನೀಯತೆ =

$$p(A)=\frac{n(A)}{n(s)}=\frac{1}{36}$$

(ii) ಕನಿಷ್ಟ ಒಂದು ಸಲ 5 ಮೇಲೆ ಬರುವ ಸಂಭವನೀಯತೆ =

$$p(A)=\frac{n(A)}{n(s)}=\frac{11}{36}$$

ಶಿಕ್ಷಕರ ಹೆಸರು : ರಾಮಕೃಷ್ಣ. ಡಿ.ಆರ್ 8867495355

ಸರ್ಕಾರಿ ಪ್ರೌಢಶಾಲೆ ಜಡಿಗೇನಹಳ್ಳಿ, ಹೊಸಕೋಟೆ ತಾ|| ಬೆಂಗಳೂರು ಗ್ರಾಮಾಂತರ ಜಿಲ್ಲೆ

2018-19 ನೇ ಸಾಲಿನ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗಾಗಿ ಕ್ರಿಯಾಯೋಜನೆ.

## ಅಭ್ಯಾಸಕ್ಕಾಗಿ ಲೆಕ್ಕಗಳು

| | | |
|---|---|---|
| 1 | ಒಂದು ಚೀಲವು ನಿಂಬೆ ಪರಿಮಳದ ಕ್ಯಾಂಡಿಗಳನ್ನು ಮಾತ್ರ ಒಳಗೊಂಡಿದೆ. ಮಾಲಿನಿಯು ಚೀಲದೊಳಗೆ ನೋಡದೆ ಒಂದು ಕ್ಯಾಂಡಿಯನ್ನು ಹೊರ ತೆಗೆಯುತ್ತಾಳೆ. ಅವಳು ಹೊರತೆಗೆಯುವ ಕ್ಯಾಂಡಿಯು (i) ಒಂದಕಿತ್ತಳೆ ಪರಿಮಳದಕ್ಯಾಂಡಿಯಾಗಿರುವ ಸಂಭವನೀಯತೆಯು ಎಷ್ಟು? (ii) ಒಂದು ನಿಂಬೆ ಪರಿಮಳದ ಕ್ಯಾಂಡಿಯಾಗಿರುವ ಸಂಭವನೀಯತೆಯು ಎಷ್ಟು? | |
| 2 | 3 ಮಕ್ಕಳ ಒಂದು ಗುಂಪಿನಲ್ಲಿ, 2 ಮಕ್ಕಳ ಜನ್ಮದಿನವು ಒಂದೇ ದಿನ ಆಗಿರದ ಸಂಭವನೀಯತೆಯು 0.992 ಎಂದು ನೀಡಿದೆ. 2 ಮಕ್ಕಳ ಜನ್ಮದಿನವು ಒಂದೇ ದಿನ ಆಗಿರುವ ಸಂಭವನೀಯತೆ ಎಷ್ಟು? | |
| 3 | ಒಂದು ಚೀಲದಲ್ಲಿ 3 ಕೆಂಪು ಚೆಂಡುಗಳು ಮತ್ತು 5 ಕಪ್ಪು ಚೆಂಡುಗಳಿವೆ. ಚೀಲದಿಂದ ಯಾದೃಚ್ಛಿಕವಾಗಿ ಒಂದು ಚೆಂಡನ್ನು ತೆಗೆಯಲಾಗಿದೆ. ತೆಗೆದ ಚೆಂಡು (i) ಕೆಂಪು (ii) ಕೆಂಪು ಅಲ್ಲದ ಚೆಂಡು ಆಗಿರುವ ಸಂಭವನೀಯತೆ ಎಷ್ಟು? | |
| 4 | ಒಂದು ಪೆಟ್ಟಿಗೆಯಲ್ಲಿ 5 ಕೆಂಪು ಗೋಲಿಗಳು, 8 ಬಿಳಿ ಗೋಲಿಗಳು ಮತ್ತು 4 ಹಸುರು ಗೋಲಿಗಳಿವೆ. ಪೆಟ್ಟಿಗೆಯಿಂದ ಯಾದೃಚ್ಛಿಕವಾಗಿ ಒಂದು ಗೋಲಿಯನ್ನು ಹೊರ ತೆಗೆಯಲಾಗಿದೆ. ಹೊರತೆಗೆದ ಗೋಲಿಯು (i) ಕೆಂಪು (ii) ಬಿಳಿ (iii) ಹಸುರು ಅಲ್ಲದ ಗೋಲಿ ಆಗಿರುವ ಸಂಭವನೀಯತೆ ಎಷ್ಟು? | |
| 5 | ಒಂದು ಗೋಲಕವು (ಹಣದ ಹುಂಡಿ) 50 ಪೈಸೆಯ 100 ನಾಣ್ಯಗಳನ್ನು, ‘ 1 ರ 50 ನಾಣ್ಯಗಳನ್ನು, ‘ 2 ಯ 20 ನಾಣ್ಯಗಳನ್ನು ‘ 5 ರ 10 ನಾಣ್ಯಗಳನ್ನು ಒಳಗೊಂಡಿದೆ. ಅದನ್ನು ಬೋರಲು ಹಾಕಿದಾಗ ಯಾವುದಾದರೂ ಒಂದು ನಾಣ್ಯ ಹೊರ ಬೀಳುವ ಸಮಾನ ಸಾಧ್ಯತೆಗಳವೆ. ಆ ನಾಣ್ಯವು (i) ಒಂದು 50 ಪೈಸೆ ನಾಣ್ಯವಾಗಿರುವ (ii) ಒಂದು ‘ 5 ರ ನಾಣ್ಯ ಆಗಿರದ ಸಂಭವನೀಯತೆ ಎಷ್ಟು? | |
| 6 | 12 ದೋµಪೂರಿತ ಪೆನ್‌ಗಳು ಆಕಸ್ಮಿಕವಾಗಿ 132 ಉತ್ತಮ ಪೆನ್‌ಗಳೊಂದಿಗೆ ಸೇರಿಕೊಂಡಿವೆ. ಒಂದು ಪೆನ್ನನ್ನು ನೋಡಿದ ಕೂಡಲೇ ಅದು ದೋµಪೂರಿತವೇ? ಅಲ್ಲವೇ? ಎಂಬುದನ್ನು ಹೇಳಲು ಸಾಧ್ಯವಿಲ್ಲ. ಯಾದೃಚ್ಛಿಕವಾಗಿ ಒಂದು ಪೆನ್ನನ್ನು ಗುಂಪಿನಿಂದ ಹೊರ ತೆಗೆಯಲಾಗಿದೆ. ಹೊರತೆಗೆದ ಪೆನ್ ಉತ್ತಮವಾಗಿರುವ ಸಂಭವನೀಯತೆಯನ್ನು ಕಂಡುಹಿಡಿಯಿರಿ. | |
| 7 | ಒಂದು ಗುಂಪಿನಲ್ಲಿರುವ 144 ಬಾಲ್‌ಪೆನ್‌ಗಳಲ್ಲಿ 20 ಪೆನ್ನುಗಳು ದೋµಪೂರಿತವಾಗಿವೆ ಮತ್ತು ಉಳಿದವು ಉತ್ತಮವಾಗಿವೆ. ನೂರಿಯು ಪೆನ್ನು ಉತ್ತಮವಾಗಿದ್ದರೆ ಖರೀದಿಸುತ್ತಾನೆ, ಆದರೆ ದೋµಪೂರಿತವಾಗಿದ್ದರೆ ಖರೀದಿಸುವುದಿಲ್ಲ. ಅಂಗಡಿಯವನು ಯಾದೃಚ್ಛಿಕವಾಗಿ ಒಂದು ಪೆನ್ನನ್ನು ತೆಗೆದುಕೊಂಡು ಆಕೆಗೆ ನೀಡುತ್ತಾನೆ. (i) ಅವಳು ಇದನ್ನು ಖರೀದಿಸುವ (ii) ಅವಳು ಇದನ್ನು ಖರೀದಿಸದ ಸಂಭವನೀಯತೆಯು ಎµ್ಟು? | |
| 8 | ಒಂದು ಪ್ರಯೋಗದ ಎಲ್ಲಾ ಪ್ರಾಥಮಿಕ ಘಟನೆಗಳ ಸಂಭವನೀಯತೆಗಳ ಮೊತ್ತವು | ಒಂದು ಘಟನೆ E ಯ ಸಂಭವನೀಯತೆ + `E ಅಲ್ಲದ’ ಘಟನೆಯ ಸಂಭವನೀಯತೆ = |
| 9 | ಖಚಿತ ಘಟನೆಯ ಸಂಭವನೀಯತೆ ಎಷ್ಟು? | ಅಸಂಭವ ಘಟನೆಯ ಸಂಭವನೀಯತೆ ಎಷ್ಟು? |

## ಬಿಂದುಗಳ ನಡುವಿನ ದೂರ

| | |
|---|---|
| (2, 3) ಮತ್ತು (4, 1) ಬಿಂದುಗಳ ನಡುವಿನ ದೂರವನ್ನು ಕಂಡುಹಿಡಿಯಿರಿ.<br>$(x_1, y_1) = (2, 3)$ , $(x_2, y_2) = (4, 1)$<br>ಸೂತ್ರ $d = \sqrt{(x_2 - x_1)^2 + (y_2 - y_1)^2}$<br>$= \sqrt{(4-2)^2 + (1-3)^2}$<br>$D = \sqrt{(2)^2 + (-2)^2}$ $d = \sqrt{4+4}$<br>$d = \sqrt{8}$ $d = \sqrt{4x2}$ $d = 2\sqrt{2}$ ಮೂಲಮಾನಗಳು | ಮೂಲಬಿಂದು ಮತ್ತು (8, -6) ಬಿಂದುವಿನ ನಡುವಿನ ದೂರವನ್ನು ಕಂಡುಹಿಡಿಯಿರಿ.<br>$(8, -6) = (x, y)$<br>ಸೂತ್ರ $d = \sqrt{x^2 + y^2}$<br>$d = \sqrt{8^2 + (-6)^2}$ $d = \sqrt{64+36}$<br>$d = \sqrt{100}$ $d = 10$ ಮೂಲಮಾನಗಳು |

| | |
|---|---|
| 1 | (1, –3) ಮತ್ತು (-5, 2) ,& (4, –5) ಮತ್ತು (-4, 2) ಬಿಂದುಗಳ ನಡುವಿನ ದೂರವನ್ನು ಕಂಡುಹಿಡಿಯಿರಿ. |
| 2 | ಮೂಲಬಿಂದು ಮತ್ತು ಬಿಂದುಗಳ ನಡುವಿನ ದೂರವನ್ನು ಕಂಡುಹಿಡಿಯಿರಿ. i) (3 , 4) ii) (-5 , 12) |

ಶಿಕ್ಷಕರ ಹೆಸರು : ರಾಮಕೃಷ್ಣ. ಡಿ.ಆರ್ 8867495355

ಸರ್ಕಾರಿ ಪ್ರೌಢಶಾಲೆ ಜಡಿಗೇನಹಳ್ಳಿ, ಹೊಸಕೋಟೆ ತಾ।। ಬೆಂಗಳೂರು ಗ್ರಾಮಾಂತರ ಜಿಲ್ಲೆ

2018-19 ನೇ ಸಾಲಿನ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗಾಗಿ ಕ್ರಿಯಾಯೋಜನೆ.

# ಹಂತ -1ರ ಕನಿಷ್ಠ ಕಲಿಕಾಂಶಗಳ ಕಲಿಕಾ ದೃಢೀಕರಣದ ತಪಸೀಲು ಪಟ್ಟಿ.

| ಕ್ರ. ಸಂ | ವಿದ್ಯಾರ್ಥಿಗಳ ಹೆಸರು | ನಿ.ಬ ಅಂಕಗಳು | ವಿದ್ಯಾರ್ಥಿಗಳ ಹೆಸರು | | | | | | | | | |
|---|---|---|---|---|---|---|---|---|---|---|---|---|
| | | | ಅಜಿತ್ | | ಚಂದನ | | ಪವನ್ | | ಸಕ್ಲೇನ್ | | ಸ್ವಪ್ನ | |
| | | | ಅ$_1$ | ಅ$_2$ | ಅ$_1$ | ಅ$_2$ | ಅ$_1$ | ಅ$_2$ | ಅ$_1$ | ಅ$_2$ | ಅ$_1$ | ಅ$_2$ |
| 1 | ವೃತ್ತಗಳಿಗೆ ಸ್ಪರ್ಶಕಗಳ ರಚನೆ. | 2 | | | | | | | | | | |
| 2 | ಸಮರೂಪ ತ್ರಿಭುಜಗಳ ರಚನೆ.(ಬಾ) | 3 | | | | | | | | | | |
| 3 | ಸಮರೂಪ ತ್ರಿಭುಜಗಳ ರಚನೆ.(ಕೋ) | | | | | | | | | | | |
| 4 | ಓಜೀವ್‌ರಚನೆ. | 3 | | | | | | | | | | |
| 5 | ನಕ್ಷೆಯ ವಿ.ರೇ.ಸ.ಜೋ.ಪರಿಹಾರ. | 4 | | | | | | | | | | |
| 6 | ಥೇಲ್ಸ್‌ನ ಪ್ರಮೇಯ | 4 | | | | | | | | | | |
| 7 | ವಿಸ್ತೀರ್ಣಗಳ ಮೇಲಿನ ಪ್ರಮೇಯ | | | | | | | | | | | |
| 8 | ಕೋ.ಕೋ. ನಿರ್ಧಾರಕ ಗುಣ | | | | | | | | | | | |
| 9 | ಪೈಥಾಗೊರಸ್‌ನ ಪ್ರಮೇಯ | | | | | | | | | | | |
| 10 | ವೃತ್ತಗಳ ಮೇಲಿನ ಪ್ರಮೇಯಗಳು | 3 | | | | | | | | | | |
| 11 | ಸೂತ್ರದ ವಿಧಾನದಿಂದ ಬಿಡಿಸುವುದು: | 3 | | | | | | | | | | |
| 12 | ಮೂಲಗಳ ಸ್ವಭಾವ | | | | | | | | | | | |
| 13 | ಸರಾಸರಿ | 3 | | | | | | | | | | |
| 14 | ಬಹುಲಕ | | | | | | | | | | | |
| 15 | ಮಧ್ಯಾಂಕ | | | | | | | | | | | |
| 16 | ತ್ರಿಭುಜದ ವಿಸ್ತೀರ್ಣ | 2 | | | | | | | | | | |
| 17 | ಶೂನ್ಯತೆಗಳ ಮೊತ್ತ & ಗುಣಲಬ್ಧಗಳು | 2 | | | | | | | | | | |
| 18 | ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ. | 2 | | | | | | | | | | |
| 19 | ಸಂಭವನೀಯತೆ | 3 | | | | | | | | | | |
| 20 | ಬಿಂದುಗಳ ನಡುವಿನ ದೂರ | 1 | | | | | | | | | | |
| | ಗಳಿಸಬಹುದಾದ ಒಟ್ಟು ಅಂಕಗಳು | 35 | | | | | | | | | | |

ಶಿಕ್ಷಕರ ಹೆಸರು : ರಾಮಕೃಷ್ಣ. ಡಿ.ಆರ್ 8867495355

## ಸರ್ಕಾರಿ ಪ್ರೌಢಶಾಲೆ ಜಡಿಗೇನಹಳ್ಳಿ, ಹೊಸಕೋಟೆ ತಾ॥ ಬೆಂಗಳೂರು ಗ್ರಾಮಾಂತರ ಜಿಲ್ಲೆ

### 2018-19 ನೇ ಸಾಲಿನ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗಾಗಿ ಕ್ರಿಯಾಯೋಜನೆ.

| ಹಂತ -2 | 1 | ಸಮಾಂತರ ಶ್ರೇಢಿ | ನಿರೀಕ್ಷಿಸಬಹುದಾದ ಅಂಕಗಳು | 02 |
|---|---|---|---|---|

| | | | |
|---|---|---|---|
| 1 | 2, 5, 8, 11, 14,…………..a=2, d=3. ( 5 - 2 = 3 ) | 4 | ಸಮಾಂತರ ಶ್ರೇಢಿಯ ಮೊದಲ n ಪದಗಳ ಮೊತ್ತ<br>$S_n = \frac{n}{2}[2a + (n-1)d]$ / $S_n = \frac{n}{2}[a + l]$ |
| 2 | 3, 1, -1, -3, -5,……………… a=3, d=-2, (-1 –1 = -2) | | |
| 3 | ಸಮಾಂತರ ಶ್ರೇಢಿಯ n ನೇ ಪದ $a_n = a+(n-1)d$ / $l = a+(n-1)d$ | | |

**1**

(i) $a = 7, d = 3, n = 8, a_n = ?$
ಸೂತ್ರ $a_n = a + (n-1)d$
$a_8 = 7 + (8-1)3$
$a_8 = 7 + (7)3$
$a_8 = 7 + 21 = 28$
$a_8 = a_n = 28$

(ii) $a = -18, n = 10, a_n = 0, d = ?$
ಸೂತ್ರ $a_n = a + (n-1)d$
$10 = -18 + (10-1)d$
$10 + 18 = 9d$
$9d = 18$  $d = \frac{18}{9}$, $d = 2$

(iii) $d = -3, n = 18, a_n = -5, a = ?$
ಸೂತ್ರ $a_n = a + (n-1)d$
$-5 = a + (18-1)(-3)$
$-5 = a + 17x(-3)$
$-5 + 51 = a$
$46 = a$,  $a = 46$

**2**

$a = 6, d = 2, a_n = 36, n = ?$
ಸೂತ್ರ $a_n = a + (n-1)d$
$36 = -6 + (n-1)2$
$36 + 6 = (n-1)2$
$42 = (n-1)2$
$\frac{42}{2} = (n-1)$
$(n-1) = 21$
$n = 21+1$,  $n = 22$

15ನೇ ಪದ ಕಂಡುಹಿಡಿಯಿರಿ.
2, 6, 10,………..
ಸೂತ್ರ $a_n = a + (n-1)d$
$a = 2, d = 4, n = 15$
$a_{11} = 2 + (15-1)4$
$a_{11} = 2 + 14 \times 4$
$a_{11} = 2 + 56$
$a_{11} = 58$

ಸಮಾಂತರ ಶ್ರೇಢಿಯ10 ಪದಗಳ ಮೊತ್ತವೇನು?
2,7,12 ,…., to 10 terms.
$a = 2 d = 7-2 = 5$, $n = 10$
$S_n = \frac{n}{2}[2a + (n-1)d]$
$S_{10} = \frac{10}{2}[2x2 + (10-1)5]$
$S_{10} = 5[4 + (9) \times (5)]$
$S_{10} = 5 \times 49 = 245$

**3** ಈ ಸಮಾಂತರ ಶ್ರೇಢಿಯ ಕೊನೆಯಿಂದ 11ನೇ ಪದ ಕಂಡುಹಿಡಿಯಿರಿ. 8, 12, 16 ………… 68.
68, 64, 60,……….16, 12, 8.
$a = 68, d = -4, n = 11, a_{11} = ?$
ಸೂತ್ರ $a_n = a + (n-1)d$
$a_{11} = 68 + (11-1)(-4)$
$a_{11} = 68 + (10)(-4)$
$a_{11} = 68 - 40 = 28$
$a_{11} = 28$

**4** 8, 3, 2,….. ಈ ಸಮಾಂತರ ಶ್ರೇಢಿಯ 22 ಪದಗಳವರೆಗಿನ ಮೊತ್ತವೇನು?
ಇಲ್ಲಿ $a = 8, d = 3 - 8 = -5, n = 22$.
$S_n = \frac{n}{2}[2a + (n-1)d]$
$S_{10} = \frac{22}{2}[2x8 + (22-1)(-5)]$
$= 11 [16+21(-5)]$
$= 11 (16 - 105)$
$= 11 (-89) = -979$

**5** 2ಅಂಕಿಗಳ ಎಷ್ಟು ಸಂಖ್ಯೆಗಳು 3 ರಿಂದ ಭಾಗಿಸಲ್ಪಡುತ್ತದೆ?
ಇಲ್ಲಿ $a = 12$ $d = 3$, $an = 99$
ಸೂತ್ರ $a_n = a + (n-1)d$
$99 = 12 + (n-1)3$
$87 = (n-1)3$
ಅಂದರೆ $n - 1 = \frac{87}{3} = 29$, $n = 29 + 1$,  $n = 30$

**6** 2, 7, 12, …. ಈ ಸಮಾಂತರ ಶ್ರೇಢಿಯ ಎಷ್ಟು ಪದಗಳ ಮೊತ್ತ 225 ಆಗಿದೆ?
$a = 2$, $d = 7 - 2 = 5$, $S_n = 245$,  $n = ?$
$S_n = \frac{n}{2}[2a + (n-1)d]$
$225 = \frac{n}{2}[2x2 + (n-1)5]$
$450 = n[4 + 5n - 5]$
$450 = 5n^2 - 5n$,  $5n^2 - 5n - 450 = 0$,  $n = 10$

### ಅಭ್ಯಾಸಕ್ಕಾಗಿ ಲೆಕ್ಕಗಳು

| | | | |
|---|---|---|---|
| 1 | 3,8,13,18 .. ಈಸಮಾಂತರ ಶ್ರೇಢಿಯ ಎಷ್ಟನೇ ಪದ 78? | 4 | ವಾರ್ಷಿಕ ಸಂಬಳ ‘ 5000 ಮತ್ತು ಪ್ರತಿವರ್ಷಕ್ಕೆ ಹೆಚ್ಚುವರಿ ಭತ್ಯೆ 200 ಇರುವ ಕೆಲಸಕ್ಕೆಸುಬ್ಬರಾವ್ 1995 ರಲ್ಲಿ ಸೇರಿದರು ಯಾವ ವರ್ಷದಲ್ಲಿ ಅವರ ಸಂಬಳ ‘ 7000 ಆಗುತ್ತದೆ? |
| 2 | 7, 13, 19, …205 ಸಮಾಂತರ ಶ್ರೇಢಿಯಲ್ಲಿರುವ ಪದಗಳ ಸಂಖ್ಯೆ ಕಂಡುಹಿಡಿಯಿರಿ | | |
| 3 | ಮೂರು ಅಂಕಿಗಳ ಎಷ್ಟು ಸಂಖ್ಯೆಗಳು 7ರಿಂದಭಾಗಿಸಲ್ಪಡುತ್ತದೆ? | 5 | 2,5, 8,…. ಶ್ರೇಢಿಯ 21 ಪದಗಳವರೆಗಿನ ಮೊತ್ತವೇನು? |
| 4 | ಸಮಾಂತರ ಶ್ರೇಢಿ 3, 8, 13 …. 253 ಇದರ ಕೊನೆಯಿಂದ ಆರಂಭಿಸಿ 20ನೇ ಪದ ಕಂಡುಹಿಡಿಯಿರಿ | 6 | ಮೊದಲ 15, 8ರ ಅಪವರ್ತ್ಯಗಳ ಮೊತ್ತವೇನು?<br>0 ಮತ್ತು 50 ರ ನಡುವಿನ ಬೆಸ ಸಂಖ್ಯೆಗಳ ಮೊತ್ತವೇನು? |

ಶಿಕ್ಷಕರ ಹೆಸರು : ರಾಮಕೃಷ್ಣ. ಡಿ.ಆರ್ 8867495355

ಸರ್ಕಾರಿ ಪ್ರೌಢಶಾಲೆ ಜಡಿಗೇನಹಳ್ಳಿ, ಹೊಸಕೋಟೆ ತಾ|| ಬೆಂಗಳೂರು ಗ್ರಾಮಾಂತರ ಜಿಲ್ಲೆ

2018-19 ನೇ ಸಾಲಿನ ಎಸ್.ಎಸ್.ಎಲ್.ಸಿ ಫಲಿತಾಂಶ ಸುಧಾರಣೆಗಾಗಿ ಕ್ರಿಯಾಯೋಜನೆ.

| 2 | ತ್ರಿಭುಜಗಳು | ನಿರೀಕ್ಷಿಸಬಹುದಾದ ಅಂಕಗಳು | 02 |
|---|---|---|---|

**1** ಚಿತ್ರದಲ್ಲಿ DE//BC ಆದರೆ EC ಕಂಡುಹಿಡಿಯಿರಿ.

$\Delta ABC$ಯಲ್ಲಿ, DE||BC (∵ ದತ್ತ)

$\therefore \frac{AD}{BD} = \frac{AE}{EC}$ [∵ಥೇಲ್ಸ್‌ನ ಪ್ರಮೇಯ]

$\Rightarrow \frac{1.5}{3} = \frac{1}{EC} \Rightarrow EC = \frac{3 \times 1}{1.5} = 2$ cm




**2** LM//CB ಮತ್ತು LN//CDಆದರೆ $\frac{AM}{AB} = \frac{AN}{AD}$ ಎಂದು ಸಾಧಿಸಿ.

LM ||C

$\therefore \frac{AM}{MB} = \frac{AL}{AC}$... (i)

,LN ||CD

$\therefore \frac{AN}{AD} = \frac{AL}{AC}$ ...(ii)

(i)ಮತ್ತು(ii) ರಿಂದ, $\frac{AM}{MB} = \frac{AN}{AD}$




